**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

ಸೆಷನ್ಸ್ ಕೇಸ್ ನಂಃ 34/2025 ಪಿಡಬ್ಲ್ಯುಃ 12

ಸಿ.ಡಬ್ಲ್ಯುಃ15

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ ಬಿ. |
| ತಂದೆಯ ಹೆಸರು | ಮಹಾಲಿಂಗ |
| ವಯಸ್ಸು | 59 ವರ್ಷ |
| ಉದ್ಯೋಗ | ಪೊಲೀಸ್ ಉಪನಿರೀಕ್ಷಕರು, ಉಡುಪಿ ನಗರ ಪೊಲೀಸ್ ಠಾಣೆ |
| ವಿಳಾಸ | ಉಡುಪಿ |

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ದಿನಾಂಕ 09-05-2025 ರಿಂದ ಇಲ್ಲಿಯವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ.

2) ನಾನು ಸದರಿ ಠಾಣೆಯ ಗುನ್ನೆ ನಂಬ್ರ 53/2025 ರ ಕಡತವನ್ನು ಮುಂದಿನ ತನಿಖೆಯನ್ನು ತಾರೀಕು 09-05-2025 ರಂದು ಚಾಸಾ- 14 ಇವರಿಂದ ಪಡೆದು ಪರಿಶೀಲಿಸಿದ್ದೆ.

3)ತಾರೀಕು 20-05-2025 ರಂದು ನಿಶಾನೆ ಪಿ-16 ನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ. ತಾರೀಕು 26-05-2025 ರಂದು ಚಾಸಾ-1, 2, ಮತ್ತು ಆರೋಪಿಯ ಗಾಯದ ಪ್ರಮಾಣ ಪತ್ರ ನಿಪಿ-11, 12, 13 ನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ. ಅದೇ ದಿನ ಎಫ್ ಎಸ್ ಎಲ್ ವರದಿ ಮತ್ತು ಎಂಒ-1 ರ ಆಯುಧವನ್ನು ತಪಾಸಣೆಗಾಗಿ ವೈದ್ಯಾಧಿಕಾರಿಗೆ ಕಳುಹಿಸಿದ್ದೆ.

4) ದಿನಾಂಕ 09-06-2025 ರಂದು ಅವರು ನಿಶಾನೆ ಪಿ-14 ಮತ್ತು 15 ರ ಅಭಿಪ್ರಾಯವನ್ನು ನೀಡಿದ್ದರು. ಸದರಿ ದಾಖಲೆಗಳಿಂದ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

**ಪಾಟೀಸವಾಲುಃ ಆರೋಪಿ ಪರವಾಗಿ ಶ್ರೀ ಆರ್.ಪಿ (ಎಲ್.ಎ.ಡಿ.ಸಿ) ವಕೀಲರಿಂದ**

1) ನಾನು ನಿಪಿ-11 ರಿಂದ 16 ರ ದಾಖಲೆಗಳನ್ನು ತನಿಖೆಯ ಸಮಯದಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಆರೋಪಿಯ ಮೇಲೆ ಒಂದು ತಪ್ಪು ತನಿಖಾ ವರದಿ ಬರೆಯಲು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ತಪ್ಪು ತನಿಖಾ ವರದಿಗೆ ಪೂರಕವಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.